

ಹನುಮಂತನ ಬಾಲದಂತಾಗಿತ್ತು. ಬೋರೇಗೌಡ ಕೇಳಿದಾಗೊಮ್ಮೆ ‘ಧಣಿ ಈ ಸಲ ಮಳೀ ಆಗಿಲ್ಲರೀ, ಕೈಗಿ ಬೆಳಿನೂ ಬರಲಿಲ್ರೀ. ಮುಂದಿನ ವರ್ಷ ಎಲ್ಲ ಕೂಡ್ಸಿ ಕೊಟ್ಟ ಬಿಡ್ತೇನ್ರೀ’ ಎಂದು ಸಬೂಬು ಹೇಳಿ ದಾಟಿಕೊಳ್ಳುತ್ತಿದ್ದ. ಬೋರೇಗೌಡನೂ ಎರಡು, ಮೂರು ವರ್ಷಗಳ ಕಾಲ ಕೆಂಚಪ್ಪ ಹೇಳಿದ್ದಕ್ಕೆಲ್ಲ ತಲೆಯಲ್ಲಾಡಿಸಿ ಸಮ್ಮತಿ ಸೂಚಿಸುತ್ತಿದ್ದ. ಅದಕ್ಕೆ ಕಾರಣವಿತ್ತು, ಸಾಲ ತಿವಿಕ್ರಮನಂತೆ ಬೆಳೆದು ನಿಂತರೆ ನನಗೇ ಅನುಕೂಲ ಅನ್ನೋದು ಒಂದಾದರೆ, ಕೆಂಚಪ್ಪನಿಗೆ ಅಷ್ಟು ಹಣ ಒಟ್ಟಿಗೆ ಕೊಟ್ಟು ಕೈ ತೊಳೆದುಕೊಳ್ಳಲು ಸಾಧ್ಯವಿಲ್ಲ ಎಂಬುದು ಇನ್ನೊಂದು. ಕೆಂಚಪ್ಪನ ಆ ತುಂಡು ಜಮೀನನ್ನು ತನ್ನ ಹೆಸರಿಗೆ ಬರೆಸಿಕೊಳ್ಳಬೇಕೆಂಬುದಾಗಿತ್ತು. ಈಗ ಆ ಸಂದರ್ಭ ಕೂಡಿ ಬಂದು, ಕೆಂಚಪ್ಪನ ಬದುಕಿನಲ್ಲಿ ಬಿರುಗಾಳಿ ಎಬ್ಬಿಸಿತ್ತು.

ಬೋರೇಗೌಡ ಕೆಂಚಪ್ಪನನ್ನು ತನ್ನ ಮನೆಗೆ ಕರೆಯಿಸಿ, ತುಂಬಿದ ಜನರ ಸಮ್ಮುಖ ಖಡಾಖಂಡಿತವಾಗಿ, ‘ನೋಡ್ ಕೆಂಚಪ್ಪ ನಾನು ನಿಂಗ ಕೊಟ್ಟ ಸಾಲ, ಅಸಲು